ಕಾಲ, ನಮಗೆ ಉಳಿದಿರತಕ್ಕದ್ದು ಇವೆಷ್ಟಿಗೇಷನ್ ಕೆಲಸವನ್ನೂ ಸಹ ಶಿಫ್ಟ್ ಸ್ಪೀಡ್ ಅಪ್ ಮಾಡಿದ್ದೇವೆ. ಇದು ವಿಳಂಬ ಆಗದ ಹಾಗೆ ನೋಡಿಕೊಳ್ಳುತ್ತೇವೆ.

Prof. M.D. Nanjundaswamy: Before 2000 AD?

ಶ್ರೀ ಎಸ್. ಬಂಗಾರಪ್ಪ : ತಾವು ಹೇಳುವುದು ಕಂಪ್ಲೀಷನ್ ಎಂದು ಕಾಣುತ್ತದೆ.

ಶಿವಮೊಗ್ಗ ಜಿಲ್ಲೆಯ ಏತ ನೀರಾವರಿ ಯೋಜನೆಗಳು

2480 - ಶ್ರೀ. ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಫ್ಟ್ ಇರಿಗೇಶನ್ ಕಾರ್ಪೋರೇಷನ್ ಮೂಲಕ 1990-91 ಮತ್ತು 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಂಡಿರುವ ಮತ್ತು ಕೈಗೊಳ್ಳಬೇಕೆಂದಿರುವ ಲಿಫ್ಟ್ ಇರಿಗೇಶನ್ ಯೋಜನೆಗಳ ವಿವರ ಮತ್ತು ಪ್ರತಿಯೊಂದು ಕೆಲಸಕ್ಕೆ ಖರ್ಚು ಮಾಡಲಾಗಿರುವ ಅಂದಾಜು ಮೊತ್ತವೆಷ್ಟು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಲಿಫ್ಟ್ ಇರಿಗೇಶನ್ ಮೂಲಕ 1990-91ನೇ ಸಾಲಿನಲ್ಲಿ ಆಗಲಿ, 1991-92ನೇ ಸಾಲಿನಲ್ಲಿ ಆಗಲಿ, ಶಿವಮೊಗ್ಗ ಜಿಲ್ಲೆಯಲ್ಲಿ, ಯಾವುದೇ ಯೋಜನೆಯನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಂಡಿರುವುದಿಲ್ಲ.

ಲಿಫ್ಟ್ ಇರಿಗೇಶನ್ ಮೂಲಕ 1990-91 ಹಾಗೂ 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಳ್ಳಬೇಕೆಂದಿರುವ ಏತ ನೀರಾವರಿ ಯೋಜನೆಗಳ ವಿವರ ಮತ್ತು ಪ್ರತಿಯೊಂದು ಯೋಜನೆಗೆ ವೆಚ್ಚ ಮಾಡಲಾಗುವ ಅಂದಾಜು ಮೊತ್ತ ಇವುಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

1990-91ನೇ ಸಾಲಿನ ಕಾರ್ಯಯೋಜನೆಯಲ್ಲಿ, ಶಿವಮೊಗ್ಗ ಜಿಲ್ಲೆಯ 6 ಯೋಜನೆಗಳಿದ್ದು, ಅವು ಯಾವುವೆಂದರೆ:

	ಅಂದಾಜಿನ ಮೊತ್ತ ಲಕ್ಷ ರೂ.ಗಳಲ್ಲಿ
1. ಏತ ನೀರಾವರಿ ಯೋಜನೆ ಜೋಳದ ಗುಡ್ಡ ಹತ್ತಿರ ತಾ: ಸೊರಬ	13.338
2. ಏತ ನೀರಾವರಿ ಯೋಜನೆ ತೊರವಂಡಾ ತಾ. ಸೊರಬ	26.869
3. ಕಾಗೋಡು ಹತ್ತಿರ ತಾ. ಸಾಗರ	10.855
4. ತಡಗಲಲೆ ಹತ್ತಿರ ತಾ. ಸಾಗರ	8.236
5. ಬಟಾನಿಜಡ್ಡು ಹತ್ತಿರ ತಾ. ಹೊಸನಗರ	2.615
6. ಭೀಮನಕಟ್ಟೆ ಹತ್ತಿರ ತಾ. ತೀರ್ಥಹಳ್ಳಿ	13.00

1991-92ನೇ ಸಾಲಿನ ಕಾರ್ಯಯೋಜನೆಯಲ್ಲಿ 1990-91ನೇ ಸಾಲಿನ ಮೇಲ್ಕಾಣಿಸಿದ 6 ಯೋಜನೆಗಳಲ್ಲದೆ ಕೆಳಕಾಣಿಸಿದ 7 ಯೋಜನೆಗಳನ್ನು ಸೇರಿಸಿಕೊಳ್ಳಲಾಗಿದೆ.

	ಅಂದಾಜಿನ ಮೊತ್ತ ರೂ. ಲಕ್ಷಗಳಲ್ಲಿ.
1. ಏತ ನೀರಾವರಿ ಯೋಜನೆ ಸನ್ಯಾಸಿ ಕೊಪ್ಪ ಹತ್ತಿರ ತಾ. ಶಿಕಾರಿಪುರ	80.00
2. ತುಮ್ಮಿನಕಟ್ಟೆ ಹತ್ತಿರ ತಾ. ಶಿಕಾರಿಪುರ	25.00
3. ನಾಗವಳ್ಳಿ ಹತ್ತಿರ ತಾ. ಸಾಗರ	10.00
4. ವರಸಿಕೊಪ್ಪ ಹತ್ತಿರ ತಾ. ಸೊರಬ	50.00
5. ಕಡಸೂರ ಹತ್ತಿರ ತಾ. ಸೊರಬ	17.00
6. ಶುಂಠಿಕೊಪ್ಪ ಹತ್ತಿರ ತಾ. ಸಾಗರ	26.00
7. ಮುಂಡವಳ್ಳಿ ಹತ್ತಿರ ತಾ. ತೀರ್ಥಹಳ್ಳಿ	8.18

ಹೀಗಾಗಿ 1991-92ನೇ ಸಾಲಿನಲ್ಲಿ ನಿಗಮದಿಂದ ಕೈಗೊಳ್ಳಬೇಕೆಂದಿರುವ ಶಿವಮೊಗ್ಗ ಜಿಲ್ಲೆಯ ಯೋಜನೆಗಳು ಸಂಖ್ಯೆ-13.

ಯಾವುದೇ ಕೆಲಸದ ನಿರ್ಮಾಣ ಕಾರ್ಯವನ್ನು ನಿಗಮದಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಂಡಿರುವುದಿಲ್ಲ. ಆದುದರಿಂದ ಯಾವುದೇ ಕೆಲಸದ ನಿರ್ಮಾಣ ಕಾರ್ಯಕ್ಕಾಗಿ ಖರ್ಚು ಮಾಡಲಾಗಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, 1990-91 ಮತ್ತು 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ, ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಯಾವುದೇ ಲಿಫ್ಟ್ ಇರಿಗೇಷನ್ ಕೆಲಸವನ್ನು ಪ್ರಾರಂಭ ಮಾಡಿಲ್ಲವೆಂದು ಉತ್ತರ ಹೇಳುತ್ತಾರೆ. ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಪ್ರಾರಂಭವಾದ ಮೇಲೆ, ಪುಕ್ಕಟೆ ಸಂಬಳ ಕೊಡುತ್ತಿದ್ದಾರೆ. ಯಾವುದೇ ಕೆಲಸವನ್ನೂ ಮಾಡುತ್ತಿಲ್ಲ. ಇದನ್ನು ಗಂಭೀರವಾಗಿ ಯೋಚನೆ ಮಾಡಿದ್ದೀರಾ? ತಾವು ಕೊಟ್ಟಿರತಕ್ಕ ಉತ್ತರದಿಂದ, ಶಿಕಾರಿಪುರ ತಾಲ್ಲೂಕು ಈ ರಾಜ್ಯದಲ್ಲಿ ಇದೆಯೋ ಹೇಗೆ ಎಂದು ಕಾಣುತ್ತದೆ. ನಾನು ತಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ, ಸನ್ಯಾಸಿಕೊಪ್ಪ ಯೋಜನೆ 4 ವರ್ಷದಲ್ಲಿ 20 ಲಕ್ಷ ಇದ್ದುದು ಈಗ 80ಲಕ್ಷಕ್ಕೆ ಹೋಗಿದೆ. ಅದೇರೀತಿ, ಶಿಕಾರಿಪುರ, ತುಂಬಿನಕಟ್ಟೆ ಲಿಫ್ಟ್ ಇರಿಗೇಷನ್ ಯೋಜನೆಯ ಕೆಲಸವನ್ನು ಪ್ರಾರಂಭ ಮಾಡುತ್ತೀರಾ? ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಯಾವುದೇ ಕೆಲಸ ಮಾಡದೇ, ಹಾಗೆಯೇ ನಿಂತಿರುವುದು ಏಕೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಈ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಹುಟ್ಟುತ್ತಲೇ ಬಾಲಗ್ರಹ ಪೀಡಿತವಾಗಿದೆ. ಬಹಳ ತೊಂದರೆಗಳನ್ನು ಅನುಭವಿಸಿ ಈಗ ನಾವು ಬೊಂಬಾಯಿಗೆ ಹೋಗಿ ನಬಾರ್ಡ್ ಚೇರ್ಮೆನ್ ಹತ್ತಿರ ಮಾತನಾಡಿ, ಇರತಕ್ಕಂಥ ಹರ್ಡಲ್ಸ್‌ನೆಲ್ಲಾ ರಿಮೂವ್ ಮಾಡಿ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಸುಮಾರಾಗಿ ಶಿಕಾರಿಪುರ ತಾಲ್ಲೂಕನ್ನು ನೆಗ್ಲೆಕ್ಟ್ ಮಾಡಿಲ್ಲ ಶಿಕಾರಿಪುರ ತಾಲ್ಲೂಕಿನ ಸನ್ಯಾಸಿಕೊಪ್ಪ ಲಿಫ್ಟ್ ಇರಿಗೇಷನ್ ಯೋಜನೆಯನ್ನು 80 ಲಕ್ಷಕ್ಕೆ ಎಸ್ಟಿಮೇಟ್ ಮಾಡಿ ನಬಾರ್ಡ್‌ಗೆ ಕಳುಹಿಸುತ್ತಿದ್ದೇವೆ. ಹಾಗೂ ಇನ್ನೊಂದು ಯೋಜನೆಯಾದ ತುಮ್ಮಿನಕಟ್ಟೆ ಯೋಜನೆ ಸಹ 25 ಲಕ್ಷ ರೂಪಾಯಿಗೆ ಎಸ್ಟಿಮೇಟ್ ಆಗಿದೆ. ಎರಡನ್ನು ನಬಾರ್ಡ್‌ಗೆ ಕಳುಹಿಸುತ್ತೇವೆ. ಈಗ

1991-92ನೇ ಸಾಲಿನಲ್ಲಿ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಬೇಕೆಂದಿರುವ ಏತ ನೀರಾವರಿ ಯೋಜನೆಗಳು

ಕ್ರ ಸಂ	ಯೋಜನೆಯ ಹೆಸರು	ಅಂದಾಜು ವೆಚ್ಚ ರೂ. ಲಕ್ಷಗಳಲ್ಲಿ	ಆಚ್ಚು ಕಟ್ಟು ಹೆಕ್ಟೇರುಗಳಲ್ಲಿ		ಷರಾ
			ಮುಂಗಾರು	ಹಿಂಗಾರು	
1	ಏತ ನೀರಾವರಿ ಯೋಜನೆ ಜೋಳದಗುಡ್ಡ ಹತ್ತಿರ ತಾ.ಸೊರಬ	13.338	89		
2.	ಏತ ನೀರಾವರಿ ಯೋಜನೆ ತೊರವೊಂಡ ಹತ್ತಿರ ತಾ. ಸೊರಬ	26.869	215		
3.	ಏತ ನೀರಾವರಿ ಯೋಜನೆ ತಡಗಡಲೆ ಹತ್ತಿರ ತಾ. ಸಾಗರ	8.236	61.54		
4.	ಏತ ನೀರಾವರಿ ಯೋಜನೆ ಕಾಗೋಡು ಹತ್ತಿರ, ತಾ. ಸಾಗರ	10.855	52.6		
5.	ಏತ ನೀರಾವರಿ ಯೋಜನೆ ಬಟಾನಿಜಡ್ಡು ಹತ್ತಿರ, ತಾ. ಹೊಸನಗರ	2.615	18.62	18.62	
6.	ಏತ ನೀರಾವರಿ ಯೋಜನೆ ಭೀಮನ ಕಟ್ಟೆ ಹತ್ತಿರ	13	86	86	
7.	ಏತ ನೀರಾವರಿ ಯೋಜನೆ ಸನ್ಯಾಸಿಕೊಪ್ಪ . ಹತ್ತಿರ, ಶಿಕಾರಿಪುರ	80	460		
8.	ಏತ ನೀರಾವರಿ ಯೋಜನೆ ತುಮ್ಮಿನಕಟ್ಟೆ ಹತ್ತಿರ, ತಾ. ಶಿಕಾರಿಪುರ	25	200		
9.	ಏತ ನೀರಾವರಿ ಯೋಜನೆ ನಾಗವಳ್ಳಿ, ಹತ್ತಿರ, ತಾ. ಸಾಗರ	10	50		
10.	ಏತ ನೀರಾವರಿ ಯೋಜನೆ ವರಡಿಕೊಪ್ಪ ಹತ್ತಿರ, ತಾ : ಸೊರಬ	50	354		
11.	ಏತ ನೀರಾವರಿ ಯೋಜನೆ ಕಡಸೂರ ಹತ್ತಿರ, ತಾ : ಸೊರಬ	17	109		
12.	ಏತ ನೀರಾವರಿ ಯೋಜನೆ ಶುಂಟಿಕೊಪ್ಪ ಹತ್ತಿರ, ತಾ, ಸಾಗರ	26.	200	-	
13.	ಏತ ನೀರಾವರಿ ಯೋಜನೆ ಮುಂಡವಳ್ಳಿ ಹತ್ತಿರ, ತಾ. ತೀರ್ಥಹಳ್ಳಿ	8.18	72	72	

ಯಾವುದೇ ಪ್ರಾಬ್ಲಂಸ್ ಇಲ್ಲ, ಎಲ್ಲಾ ಬಗೆಹರಿದಿದೆ. ಈ ಎರಡನ್ನೂ ನಬಾರ್ಡ್‌ನಿಂದ ಮಂಜೂರಾಗಿ ಬಂದರೆ ಮಾಡಿಸಿಕೊಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ರೆಕಾರ್ಡ್ಸ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ಐದಾರು ವರ್ಷಗಳಿಂದ ಇದು ಹಾಗೆಯೇ ಇದೆ. ನನ್ನ ಕ್ಷೇತ್ರದಲ್ಲಿ ಬೇರೆ ಯಾವುದೇ ಕೆಲಸ ತೆಗೆದುಕೊಳ್ಳದಿದ್ದರೂ ಬೇಡ, ಇದೊಂದನ್ನಾದರೂ ಕೆಲಸ ಮಾಡಿಸಿಕೊಡಿ ಎಂದು ಹೇಳುತ್ತಾ ಬಂದಿದ್ದೇನೆ. ಪ್ರತಿಸಾರಿ ಬಜೆಟ್‌ನಲ್ಲಿ ಇದು ಬರುತ್ತದೆ, ಕೆಲಸ ಆಗದೇ ನಿಂತು ಹೋಗುತ್ತದೆ. ಈ ವರ್ಷವಾದರೂ ಈ ಎರಡು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟಗಳಕೆಲಸ ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಫೀಸಬಿಲಿಟಿ ಬಂದರೆ ಖಂಡಿತಾ ಪ್ರಾರಂಭಮಾಡುತ್ತೇವೆ.

ಅಧ್ಯಕ್ಷರು : ಫೀಸಬಿಲಿಟಿ ಬರಬೇಕಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾಂತ್ರಿಕ ಕಾರಣಗಳನ್ನು ಇಲಾಖೆಯವರು ಬೇಕೆಂತಲೇ ಕೊಡುತ್ತಿದ್ದಾರೆ, ಫೀಸಬಿಲಿಟಿ ಇದೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಫೀಸಬಿಲಿಟಿ ಇಲ್ಲದೇ ಹೋದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ.

ಅಧ್ಯಕ್ಷರು : ನೀರು ಇಲ್ಲದೇ ಹೋದರೆ ಅವರು ಏನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ನಬಾರ್ಡ್‌ನವರು ಒಂದು ಹೆಕ್ಟೇರ್‌ಗೆ 3500 ರೂಪಾಯಿ ಖರ್ಚು ಎಂದು ಫಿಕ್ಸ್ ಮಾಡಿದ್ದಾರೆ. ಅದಕ್ಕೆ ಮೇಲೆ ಹೋದರೆ ಕಷ್ಟವಾಗುತ್ತದೆ. ಏನೋ ಒಂದು ಐದು ನೂರು ರೂಪಾಯಿ ಹೆಚ್ಚು ಕಡಿಮೆ ಆದರೆ ಮಾಡಬಹುದು. ಆದರೆ ಐದು ಸಾವಿರ ಹೆಚ್ಚು ಕಡಿಮೆ ಆದರೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಫೀಸಬಿಲಿಟಿ ಕೊಶ್ಚನ್ ಎಂದು ಹೇಳುತ್ತಿದ್ದಾರೆ. ಆ ಪ್ರಶ್ನೆಯೇ ಇಲ್ಲ. ಇದು ಎಸ್ಟಿಮೇಟ್ ಸ್ಕಾಂಕ್ಷನ್ ಆಗಿ ಬಜೆಟ್‌ನಲ್ಲಿ ಸೇರಿತ್ತು. ಇದೇ ಕಾರಣ ಹೇಳಿಕೊಂಡು ಐದಾರು ವರ್ಷದಿಂದ ಮುಂದೆ ಹಾಕುತ್ತಿದ್ದಾರೆ. ದಯಮಾಡಿ ಫೀಸಬಿಲಿಟಿ ಬರುವ ಹಾಗೆ ಮಾಡಿ ಕೆಲಸ ಪ್ರಾರಂಭ ಮಾಡಿಸಿ.

ಅಧ್ಯಕ್ಷರು : ಫೀಸಬಿಲಿಟಿ ಬರುವ ಹಾಗೆ ಅವರು ಹೇಗೆ ಮಾಡುವುದಕ್ಕೆ ಸಾಧ್ಯ? ಫೀಸಬಲ್ ಅಥವಾ ನಾನ್ ಫೀಸಬಲ್ ಎಂಬುದು ಏನಿದ್ದರೂ ಟೆಕ್ನಿಕಲ್ ಒಪೀನಿಯನ್. ಮಂತ್ರಿಗಳನ್ನು ನೀವು ಫೀಸಬಿಲಿಟಿ ಬರುವ ಹಾಗೆ ಮಾಡಿ, ಫೀಸಬಿಲಿಟಿ ಬರುವ ಹಾಗೆ ಮಾಡಿ ಎಂದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಫೀಸಬಿಲಿಟಿ ಬರುತ್ತದೆ. ಅದು ಬಂದುದರಿಂದಲೇ ಈ ಕೆಲಸವನ್ನು ಬಜೆಟ್‌ನಲ್ಲಿ ಸೇರಿಸಿದ್ದರು. ಈಗ ಯಡಿಯೂರಪ್ಪನ ಕ್ಷೇತ್ರ, ಇದು, ವಿರೋಧ ಪಕ್ಷದ ನಾಯಕರ ಕ್ಷೇತ್ರ ಎಂದು ಉದ್ದೇಶಪೂರ್ವಕವಾಗಿ ತಡೆಯುತ್ತಿದ್ದಾರೆ. ಇದರಲ್ಲಿ ಅಧಿಕಾರಿಗಳ ಕೈವಾಡ ಇದೆ. ಈ ರೀತಿ ಆದರೆ ಅಭಿವೃದ್ಧಿ ಕೆಲಸ ಆಗಬೇಕೋ ಬೇಡವೋ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಉದ್ದೇಶಪೂರ್ವಕವಾಗಿ ತಡೆಹಿಡಿದಿಲ್ಲ. ದುಡ್ಡೂ ಸಹಿತ ಬಿಡುಗಡೆಯಾಗಿದೆ. ನಬಾರ್ಡ್‌ನಿಂದ ದುಡ್ಡೂ ಬರುತ್ತಿದೆ. ಖಂಡಿತವಾಗಿ ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಎಸ್ಟಿಮೇಟ್ ಸ್ಕ್ರಾಂಕ್ಷನ್ ಮಾಡುವಾಗ ಫೀಸಬಿಲಿಟಿ ನೋಡಿಕೊಳ್ಳಬೇಕಾಗಿತ್ತೋ, ಬೇಡವೋ?

ಅಧ್ಯಕ್ಷರು : ಡಿಮ್ಯಾಂಡ್ ಬಂದಾಗ ನೀವು ಮಾತನಾಡಿ.

ತುಮಕೂರಿನಲ್ಲಿ ಯುವಕ ವಿದ್ಯಾರ್ಥಿ ನಿಲಯ ಸ್ಥಾಪನೆ

2460 - ಶ್ರೀ ಷಫಿ ಅಹಮದ್(ತುಮಕೂರು) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನಲ್ಲಿ ಕೇಂದ್ರ ಯೂತ್ ಹಾಸ್ಟೆಲ್‌ನ್ನು ಆರಂಭಿಸುವ ಪ್ರಸ್ತಾವನೆ ಇದೆಯೇ?

ಆ) ಯೂತ್ ಹಾಸ್ಟೆಲ್ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಇ) ಯೂತ್ ಹಾಸ್ಟೆಲ್‌ನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಸಂಸ್ಕೃತಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಷಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಇಲ್ಲಿ 'does not arise' ಎಂದು ಹೇಳಿದ್ದಾರೆ. ಆದರೆ ಸನ್ಮಾನ್ಯ ಸಚಿವರು ಇದರ ಬಗ್ಗೆ ಪತ್ರ ಬರೆದಿದ್ದಾರೆ. ಎರಡು ಎಕರೆ ಜಮೀನನ್ನು ಹಾಸ್ಟೆಲ್‌ಗಾಗಿ ಕೊಡಬೇಕೆಂದು ಜಿಲ್ಲಾಪರಿಷತ್‌ಗೆ ಪತ್ರ ಬರೆದಿದ್ದಾರೆ. ಜಿಲ್ಲಾ ಪರಿಷತ್‌ನವರು ಎರಡು ಎಕರೆ ಜಾಗವನ್ನು ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಟ್ಟಿದ್ದಾರೆ. ಉತ್ತರ ನೋಡಿದರೆ 'ಡಸ್ ನಾಟ್ ಆರೈಸ್' ಎಂದು ಕೊಟ್ಟಿದ್ದಾರೆ. ಜಿಲ್ಲಾ ಪರಿಷತ್‌ನವರು ಯೂಥ್ ಸರ್ವೀಸ್ ಹಾಸ್ಟಲ್ ಕಟ್ಟುವುದಕ್ಕೆ ಎರಡು ಎಕರೆ ಜಾಗ ಕೊಟ್ಟಿದ್ದಾರೆ. ಕೇಂದ್ರ ಸರಕಾರದವರು ಹಣ ಕೊಟ್ಟಿದ್ದರೆ ಅತೀ ಶೀಘ್ರದಲ್ಲಿ ಈ ಹಾಸ್ಟೆಲ್ ಕೆಲಸವನ್ನು ಪ್ರಾರಂಭಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ.ಮುನಿಯಪ್ಪ (ರೇಷ್ಮೆ ಖಾತೆ ರಾಜ್ಯ ಸಚಿವರು) ಯುವಜನ ಸೇವಾ ರಾಜ್ಯ ಮಂತ್ರಿಗಳ ಪರವಾಗಿ : ಈ ವಿಚಾರದಲ್ಲಿ ಒಂದು ಪತ್ರ ವ್ಯವಹಾರ ಮಾತ್ರ ನಡೆದಿದೆ. ಲೋಕಸಭೆಯ ಉಪಾಧ್ಯಕ್ಷರು, ನಮ್ಮ ಯೂಥ್ ಸರ್ವೀಸ್ ನಿರ್ದೇಶಕರಿಗೆ ಒಂದು ಪತ್ರ ಬರೆದು ಜಿಲ್ಲಾ ಪರಿಷತ್ ಅಧ್ಯಕ್ಷರು ಇದಕ್ಕೆ ಬೇಕಾದಂಥ ಜಾಗ ಕೊಡುವುದಕ್ಕೆ ಸಹಕರಿಸುತ್ತಾರೆ. ಅವರ ಜೊತೆ ಪತ್ರ ವ್ಯವಹಾರ ನಡೆಸಿ ಎಂದು ಬರೆದು ಕಳುಹಿಸಿಕೊಟ್ಟಿದ್ದಾರೆ. ಅವರು ಸೆಪ್ಟೆಂಬರ್ 4 ರಂದು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಅವರು ನಿವೇಶನ ಕೊಡುವುದರ ಬಗ್ಗೆ ಖಾತ್ರಿಯನ್ನು